ಅಪ್ಪ ಅರೆ ಆಯಸ್ಸಲ್ಲಿ ತೀರಿಕೊಂಡ ಮೇಲೆ ಶಿವರಾಮನೇ ಮನೆಯ ಯಜಮಾನ. ಸೀತಾಲಕ್ಷ್ಮಿ ಎಂಟನೇ ಕ್ಲಾಸು ಪಾಸಾಗಿದ್ದರೆ ಶಿವರಾಮನಿಗೆ ಅಷ್ಟು ವಿದ್ಯೆಯೂ ಇಲ್ಲ. ನಾಲ್ಕೋ, ಐದೋ ವರ್ಷ ಸ್ಕೂಲಿಗೆ ಮಣ್ಣು ಹೊತ್ತಿದ್ದ. ಏಕೆಂದರೆ ಅಡಿಕೆ ತೋಟ, ಎಂಟು ಎಕರೆ ಭತ್ತ ಬೆಳೆಯುವ ಗದ್ದೆ ಇದ್ದ ಜಮೀನ್ದಾರಿ ಕಟುಂಬ. ಜಾತಕ ಕೂಡುತ್ತದೆ ಅಂದರೆ ಕಣ್ಣು ಮುಚ್ಚಿ ಹುಡುಗಿಯನ್ನು ಮದುವೆ ಮಾಡಿಕೊಡುತ್ತಿದ್ದ ಕಾಲ. ವಯಸ್ಸಿನ ಅಂತರ ದೊಡ್ಡ ವಿಷಯವೇ ಅಲ್ಲ. ಇಷ್ಟಕ್ಕೂ ಸೀತಾಲಕ್ಷ್ಮಿ ಪುಣ್ಯವಂತೆ ಎಂದು ಅವಳ ಅಮ್ಮ ಅಟ್ಟ ಹತ್ತಿಸಿ ಕೂರಿಸಿದ್ದರು. ಅಪ್ಪನಿಗೂ, ಅಮ್ಮನಿಗೂ ಭರ್ತಿ ಇಪ್ಪತ್ತು ವರ್ಷಗಳ ವ್ಯತ್ಯಾಸ. ಎರಡನೇ ಸಂಬಂಧ. ಮೊದಲ ಹೆಂಡತಿಯ ಇಬ್ಬರು ಮಕ್ಕಳನ್ನು ಸ್ವಂತ ಮಕ್ಕಳಂತೆ ನೋಡಿಕೊಂಡ ಪುಣ್ಯಾತ್ಗಿತ್ತಿ. ಸ್ವಂತ ಮಕ್ಕಳಿಗಾದರೆ ಎರಡೇಟು ಹೊಡೆದರೂ ನಡೆಯುತ್ತದೆ. ಮಲಮಕ್ಕಳ ಮೈ ಮುಟ್ಟಿದರೆ ದೊಡ್ಡ ಪುಕಾರು. ಅಪವಾದ. ಮಲತಾಯಿ ಮತ್ತೆ ಹೇಗಿರುತ್ತಾಳೆ ಎನ್ನುವ ಕಿರೀಟ. ಸೀತಾಲಕ್ಷ್ಮಿ ಇಂಥಾ ಕಂಟಕಗಳನ್ನು ಎದುರಿಸಬೇಕಾದ್ದಿಲ್ಲ ಎಂದು ಅಮ್ಮನಿಗೆ ಪರಮ ಸಂತೋಷ.

ಶಿವರಾಮ ನೋಡಲು ಸುರೂಪಿ. ಅನುಕೂಲದ ಮನೆತನ. ಈಡುಜೋಡು ಚೆನ್ನಾಗಿದೆ. ಹೆಣ್ಣಾದವಳಿಗೆ ಮತ್ತೇನು ಬೇಕು ಎನ್ನುವುದು ಆವಾಗಿನ ಮನೋಧರ್ಮ. ಮನೆಯಲ್ಲಿ ಶಿವರಾಮನ ಸಕೇಶಿ ಅಕ್ಕ ಕಮಲಾ ಇದ್ದಳು. ವಿಧವೆಯಾದ ಮೇಲೆ ಕೇಶಮುಂಡನ ಮಾಡಿಸಿಕೊಂಡ ಅತ್ತೆ ಇದ್ದರು. ಮದುವೆಯ ವಯಸ್ಸಿಗೆ ಬಂದ ಮೈದುನ ಇದ್ದ. 'ಹೊಂದಿಕೊಂಡು ಹೋಗಬೇಕು' ಎಂದು ಅರೆದು ಹುಯ್ದು ಕಳಿಸಿದ್ದರು ಹೆತ್ತವರು. ಸೀತಾಲಕ್ಷ್ಮಿ ಹೊಂದಿಕೊಂಡು ಹೋದಳು ಕೂಡಾ. ಮನೆಗೆಲಸದಲ್ಲಿ ಅತ್ತಿಗೆ, ಅತ್ತೆ ಸಹಾಯ ಮಾಡುತ್ತಿದ್ದುದರಿಂದ ಅದೊಂದು ದೊಡ್ಡ ಹೊರೆ ಅನಿಸಲಿಲ್ಲ. ಆದರೆ ಮುಖ್ಯವಸ್ತುವೇ ಸ್ವಲ್ಪ ಅತಿರೇಕದ್ದು. ಶಿವರಾಮ ಮಹಾ ಎದುರುಸಿಟ್ಟಿನ ಮನುಷ್ಯ. ಮೂಗಿನ ತುದಿಯಲ್ಲಿ ಸಿಟ್ಟು. ವಯಸ್ಸನ್ನು ಗಮನಿಸದೆ ಅವನು ಅಕ್ಕನಿಗೋ, ಅಮ್ಮನಿಗೋ ಸಟಕ್ಕನೆ ಏನಾದರೂ ಹೇಳಿದರೆ ಸೀತಾಲಕ್ಷ್ಮಿಗೇ ಒಂಥರಾ ಆಗುತ್ತಿತ್ತು. ಹೆಂಡತಿ ಎಂದು ಸೀತಾಲಕ್ಷ್ಮಿಯನ್ನು ತಲೆಯ ಮೇಲೆ ಏರಿಸಿ ಕೂರಿಸಿಕೊಳ್ಳಲಿಲ್ಲ ಶಿವರಾಮ. ಎಲ್ಲಾ ಸರಿಯಾಗಿದ್ದಲ್ಲೂ ಏನೋ ಹುಳುಕು ಹುಡುಕುವವನ್ನು ಕಂಡು 'ಜನ ಹೀಗೂ ಇರುತ್ತಾರಾ?' ಎಂದು ಹೊಸ ಮದುಮಗಳಿಗೆ ಅಚ್ಚರಿ. ಗಂಡನೊಡನೆ ಮುಖ ಕೊಟ್ಟು ಮಾತನಾಡಲು ಅವಳಿಗೆ ಧೈರ್ಯ ಇರಲಿಲ್ಲ. ಹೆದರಿ ಹೆದರಿಯೇ ಒಡನಾಡುವುದು ಅಭ್ಯಾಸವಾಗಿತ್ತು. ಅವನಿಗೆ ಸಿಟ್ಟು ಬರಲು ಇಂಥಾದ್ದೇ ದೊಡ್ಡ ಕಾರಣ ಬೇಕು ಎನ್ನುವುದಿರಲಿಲ್ಲ. ಒಂದು ಘಟನೆ ಇವತ್ತಿಗೂ ನೆನಪಿದೆ ಸೀತಾಲಕ್ಷ್ಮಿಗೆ. ಅವತ್ತು ಮನೆಯ ಗಂಡಸರಿಬ್ಬರೂ ಊಟಕ್ಕೆ ಕೂತಿದ್ದರು. ಸೀತಾಲಕ್ಷ್ಮಿ ಬಡಿಸುತ್ತಿದ್ದಳು. ತಂಬುಳಿಯಲ್ಲಿ ಮೊದಲ ಅನ್ನ ಕಲೆಸಿ ಒಂದು ತುತ್ತು ಬಾಯಿಗಿಟ್ಟಿದ್ದ ಶಿವರಾಮ. ಅನ್ನದ ತುತ್ತಿನೊಡನೆ ಉದ್ದದ ಒಂದು ಕೂದಲೆಳೆ ಬಾಯಿಗೆ ಬಂತು. ಕೆಂಚಗಾಯ್ತು ಮುಖ. 'ಯಾರು ಅಡುಗೆ ಮಾಡಿದ್ದು? ಕಣ್ಣು ಹೊಟ್ಟೆ ಹೋಗಿದೆಯಾ?' ದನಿ ಏರಿಸಿ ಕೇಳಿದ ಶಿವರಾಮ. ಯಾರು ಅಡುಗೆ ಮಾಡಿದ್ದು? ಮೂರೂ ಜನ ಹೆಂಗಸರು ಕೈ ಜೋಡಿಸಿದ್ದರು. ತರಕಾರಿ ಹೆಚ್ಚಿಕೊಟ್ಟಿದ್ದು ಲಾಗಾಯ್ತಿನ ಪದ್ಧತಿಯಂತೆ ಅತ್ತೆ ವೆಂಕಮ್ಮ. ಮೇಲೋಗರಕ್ಕೆ ಅರೆದುಕೊಟ್ಟಿದ್ದು ಸೀತಾಲಕ್ಷ್ಮಿ ಮತ್ತು ಒಲೆಯ ಮುಂದೆ ಕೂತು ಅಡುಗೆ ಮಾಡಿದ್ದು ಕಮಲಾ. ಮತ್ತೆ ತುತ್ತು ಎತ್ತಲಿಲ್ಲ ಶಿವರಾಮ. ಎಲೆಯಲ್ಲಿದ್ದ ಅನ್ನವನ್ನು ಬೆದಕಿ ಬೆದಕಿ ಪರೀಕ್ಷೆ ಮಾಡಿದ. ಅಲ್ಲೇ ಬಾಗಿಲ ಹತ್ತಿರ ನಿಂತಿದ್ದರು ವೆಂಕಮ್ಮ. 'ಅದೆಂತಕ್ಕೆ ಹಂಗೆ ಮಾಡ್ತೀಯೋ? ಏನೋ ಪರಾಮೋಷಿ ಆಗಿದೆ. ತೆಗೆದು ಬದಿಗಿಟ್ರೆ ಆಯ್ತಪ್ಪಾ...' ಅಂದರು.

'ಅಡುಗೆ ಮಾಡ್ಬೇಕಾರೆ ಮೈಮೇಲೆ ಪ್ರಜ್ಞೆ ಇರ್ಲಿಲ್ವಾ?'

'ಥೂ ಹುಚ್ಚಪ್ಪಾ, ಯಾರಾರೂ ಬೇಕ್ ಬೇಕೂಂತ ಹಾಕ್ತಾರಾ? ಏನೋ ಪರಾಮೋಷಿ...'

'ಹೇಳಿದ್ದೇ ಹೇಳ್ಬೇಡ ನೀನು. ನಂಗೆ ಇಂತದೆಲ್ಲಾ ಒಡ್ಡೊಡ್ಡು ಕೆಲಸ ಇಷ್ಟ ಆಗಲ್ಲ. ಅಸಂಯ್ಯ ಆಗುತ್ತೆ...'

'ಆಯ್ತಪ್ಪಾ ಮಾರಾಯಾ, ನಾಳೆಂದ ನಾಜೂಕಾಗಿ ಕೆಲಸ ಮಾಡ್ತೀವಿ ಆಯ್ತಾ?'

ತಂಬುಳಿಗೆ ಕಲೆಸಿದ್ದ ಅಷ್ಟೂ ಅನ್ನವನ್ನು ಬದಿಗೆ ದೂಡಿ ಹುಳಿಗೆ ಅನ್ನ ಕಲೆಸಲು ಸನ್ನದ್ಧನಾದ ಶಿವರಾಮ. ಹುಳಿ ಬಡಿಸಲು ಬಂದ ಸೀತಾಲಕ್ಷ್ಮಿಯ ಕೈಗಳು ಅಕ್ಷರಶಃ ನಡುಗುತ್ತಿದ್ದುವು. ತನ್ನ ತೌರಿನಲ್ಲಿ ಇಂಥದ್ದೆಲ್ಲಾ ಕಂಡು ಗೊತ್ತಿಲ್ಲದ ಹುಡುಗಿಗೆ ದಿಗಿಲು, ದುಃಖ. ವಾಸ್ತವವಾಗಿ ಇದು ತನ್ನ ತಲೆಕೂದಲು ಎಂದು ಅವಳಿಗೆ ಅನುಮಾನ. ಮಂಗಳವಾರ ಅವತ್ತು. ಸೀತಾಲಕ್ಷ್ಮಿ ಅತ್ತೆ ಹೇಳಿದಂತೆ ತಲೆಗೆ ಎರೆದುಕೊಂಡಿದ್ದಳು. ಒದ್ದೆ ತಲೆಕೂದಲನ್ನು ಪಾಣಿಪಂಚೆಯಿಂದ ವರೆಸಿಕೊಂಡು ತುದಿಗಂಟು ಹಾಕಿಕೊಂಡಿದ್ದರೂ ಉಟ್ಟ ಸೀರೆಯ ಮೇಲೆ ಕೂದಲು ಉದುರಿ ಬಿದ್ದಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಸೀರೆಯ ಮೇಲಿದ್ದಿದ್ದು ಅಡುಗೆಗೆ ಬಿದ್ದರೆ ಏನಾಶ್ಚರ್ಯ? ಕತ್ತಲು ಕತ್ತಲಿನ ಅಡುಗೆಮನೆ. ಚುರುಕುಗಣ್ಣಿನ ಹುಡುಗಿಯಿಂದ ಕೂಡಾ ಕಣ್ತಪ್ಪು ಆಗಿದ್ದರೆ ಆಶ್ಚರ್ಯವೇನಿಲ್ಲ. ತನ್ನಿಂದಾಗಿ ಎಲ್ಲರಿಗೂ ಮಂಗಳಾರತಿ ಆಯ್ತೆಂದು ಹುಡುಗಿಗೆ ಕಣ್ಣು ಒದ್ದೆಯಾಗಿತ್ತು. ಹುಳಿ ಬಡಿಸಲು ಬಂದವಳ ನಡುಗುತ್ತಿದ್ದ ಕೈನಿಂದ ಸೌಟು ಎಲೆಯಲ್ಲಿದ್ದ ಅನ್ನಕ್ಕೆ ಬಿದ್ದಿದ್ದು ಮಹಾಪರಾಧವಾಗಿಹೋಯ್ತು. ತಣಿಯಲು ಬಂದಿದ್ದ ಶಿವರಾಮನ ಸಿಟ್ಟು ಮತ್ತೆ ಏರಿತು.

'ಬೆಳಿಗ್ಗೆ ತಿಂಡಿ ತಿಂದಿಲ್ವೇನೇ? ಕೈಯಲ್ಲಿ ಬಲ ಇಲ್ವಾ?' ಕೇಳಿದ ಪರಶುರಾಮ. 'ಬರುತ್ತೇನೆ, ಬರುತ್ತೇನೆ' ಅನ್ನುವಂತಿದ್ದ ಅಳು ಹೊರಗೆ ನುಗ್ಗಿ ಬಂದೇಬಿಟ್ಟಿತು. ಸೀತಾಲಕ್ಷ್ಮಿ ಸರಕ್ಕನೆ ತಿರುಗಿ ಅಡುಗೆಮನೆ ಸೇರಿಕೊಂಡಳು.

'ಥುತ್, ಹೆಂಗಸ್ರ ಜಾತಿಗಿಷ್ಟು. ಮಾತೆತ್ತಿದ್ರೆ ಅತ್ತುಬಿಟ್ರೆ ಸೈ. ಅತ್ತು ಹೆದರಿಸೋಕೆ ಬಂದ್ರೆ ಇಲ್ಲಿ ಹೆದರೋರು ಯಾರಿಲ್ಲ ಗೊತ್ತಾಯ್ತಾ?' ಎಲ್ಲಾ ಕಿವಿಯ ಮೇಲೆ ಬೀಳುತ್ತಿತ್ತು, ಒಳಗೆ ಮಂಡಿಯಲ್ಲಿ ಮುಖ ಹುದುಗಿಸಿ ಕೂತ ಸೀತಾಲಕ್ಷ್ಮಿಗೆ. ತನ್ನ ತೌರಿನಲ್ಲಾದರೆ ಅಣ್ಣಂದಿರು ಇಂತಾ ಪ್ರಸಂಗವನ್ನು ಎಷ್ಟು ತಮಾಷೆಯಾಗಿ ತೆಗೆದುಕೊಳ್ಳುತ್ತಿದ್ದರು ಎಂದು ನೆನೆದು ದುಃಖದ ತೀವ್ರತೆ ಹೆಚ್ಚಾಗಿತ್ತು. ಮಲ ಅಣ್ಣಂದಿರಾದರೇನು, ಈ ತಂಗಿಯನ್ನು ಕಣ್ಣಗೊಂಬೆಯಂತೆ ಕಾಪಾಡಿಕೊಂಡಿದ್ದಾರೆ. ಬೆಳೆಸಿದ್ದಾರೆ. ಹಿಡಿದದ್ದು ಮುಟ್ಟಿದ್ದಕ್ಕೆಲ್ಲಾ ಹೆದರಿ ಹೆದರಿ ಸಾಯುವ ಪರಿಸ್ಥಿತಿ ಆ ಮನೆಯಲ್ಲಿರಲಿಲ್ಲ. ಅಲ್ಲಿ ಹೀಗೇನಾದರೂ ಆದರೆ ಅದನ್ನೇ ಒಂದು ತಮಾಷೆಯಾಗಿ ತೆಗೆದುಕೊಂಡು ಹೇಗೆ ನಕ್ಕು ನಲಿಯುತ್ತಿದ್ದರು ಎಂದು ಅವಳಿಗೆ ಅನಿಸಿಯೇ ಅನಿಸಿತು.

'ಇವತ್ತೇನು ವಿಶೇಷ, ಅಡುಗೆಗೆ ಕರಿಕೇಸರಿ ಹಾಕಿದೀರಿ?' ಅನ್ನುವ ನಗೆಚಾಟಿಕೆ ಮಾಮೂಲು.

'ಹೌದು ಕಣೋ, ನಿಂಗೇಂತ್ಲೇ ಹಾಕಿದ್ದು. ರುಚಿಯಾಗಿಲ್ವಾ ಹುಳಿ?' ಅನ್ನುವಷ್ಟು ಸಲಿಗೆ ತಂಗಿಗಿತ್ತು. ಅಂದೂ ಅನ್ನುತ್ತಿದ್ದಳು. ಅದನ್ನು ಎತ್ತಿ ಹಿಡಿದು ಕಣ್ಣಳತೆಯಲ್ಲಿ ಅಂದಾಜು ಮಾಡಿ ಅಮ್ಮನ ತಲೆಕೂದಲೋ, ತಂಗಿಯದೋ ಎನ್ನುವ ವಾದ ವಿವಾದ ಕೂಡಾ ನಡೆಯುತ್ತಿತ್ತು. ಏನು ಅರೆಯಾಗಿದೆ ಈ ಮನೆಯಲ್ಲಿ? ಯಾಕೆ ಎಲ್ಲರ ಮೇಲೂ ಉರಿದು ಬೀಳುವ ಸಿಟ್ಟು ಗಂಡನಿಗೆ? ಅವತ್ತು ಕಮಲ ಬಡಿಸಲು ಹೋದರೆ ಕೇಳಲಿಲ್ಲ ಗ್ರಾಸ್ತ.

'ನೀನ್ಯಾಕೆ ಬಂದೆ? ಅವಳಿಗೇನು ಕೈ ಮೋಟಾಗಿದ್ಯಾ? ಯಾರಾರೂ ಅಪ್ಪಂತೋರು ಮನೆಗೆ ಬಂದ್ರೆ ಹಿಂಗಿದ್ದೇ ಮಾಡಿಡಿ ಆಯ್ತಾ? ಮರ್ಯಾದೆ ಬರುತ್ತೆ...'

'ನಾಯಿ ಬಾಯಿಗೆ ಕೋಲು ಹೆಟ್ಟಿದ ಹಂಗೆ' ಎನ್ನುವ ಗಾದೆ ನೆನಪಾಗಿತ್ತು ಸೀತಾಲಕ್ಷ್ಮಿಗೆ. ಕಣ್ಣೊರೆಸಿಕೊಂಡು ಅತ್ತಿಗೆ ಒಳಗೆ ತಂದಿದ್ದ ಹುಳಿ ಪಾತ್ರೆಯನ್ನು ಕೈಗೆತ್ತಿಕೊಂಡಿದ್ದಳು. 'ಮೈಯೆಲ್ಲಾ ಕಣ್ಣಾಗಿ...' ಎನ್ನುವಂತೆ ಗಂಡನಿಗೆ ಬಡಿಸಿದ್ದಳು. ಶಿವರಾಮ ಉಂಡೆದ್ದು, ಕೈ ತೊಳೆದು, ಕವಳ ಕಟ್ಟಲು ಮುಂಚೇಕಡೆಗೆ ದಾಟಿದ ಮೇಲೆ ಊಟಕ್ಕೆ ಕೂತ ಹೆಂಗಸರಿಗೆ ಬಡಿಸಲು ಟೊಂಕ ಕಟ್ಟಿ ನಿಂತಿದ್ದು ಮೈದುನ ವೆಂಕಟರಾಮು.

ಸೀತಾಲಕ್ಷ್ಮಿಯ ಕಣ್ಣುಗಳಲ್ಲಿ ಇನ್ನೂ ಗಂಗಾಭವಾನಿ ಧುಮುಕುತ್ತಿರುವುದನ್ನು ಕಂಡು ಸಮಾಧಾನ ಹೇಳಿದ್ದ,

'ಒಂದೇ ದಿನಕ್ಕೆ ಕಣ್ಣೀರೆಲ್ಲಾ ಖಾಲಿ ಮಾಡ್ಕಂಬೇಡಿ ಅತ್ಗೆ. ದಿನಾ ಏನಾದ್ರೊಂದು ರಾಮಾಯಣ ಈ ಮನೇಲಿ ನಡೀತಾನೇ ಇರುತ್ತೆ. ಅಳ್ತಾ ಕೂತ್ಗಂಡ್ರೆ ಮುಗೀತು ಕಥೆ. 'ನಂಗಲ್ಲ' ಅನ್ನೋ ಹಂಗೆ ತಟ್ಟಿ ಹಾರಿಸಿಬಿಡ್ಬೇಕು..'

'ಹೌದು ಕಣೇ. ಏನು ಮಾತಾಡ್ತೀನಿ ಅಂತ ಅವನಿಗೆ ಎಷ್ಟೋ ಸಲ ಗೊತ್ತೇ ಇರಲ್ಲ. ಬಾಯಿಗೆ ಬಂದದ್ದು ವದರಿಬಿಡ್ತಾನೆ...' ಕಮಲತ್ತಿಗೆಯ ಸಾಂತ್ವನ.

(ಸಶೇಷ)